ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಡಿಸೆಂಬರ್ **ನಮ್ಮ ಹೆಮ್ಮೆಯ ರೈತ** 2024

ಹೆಸರು : ಸರ್ವೇಶ ರಾಯಡು ತಂ/ ಬಾಸ್ಕರ ರಾವ್

ವಿಳಾಸ : ಗ್ರಾಮ, ಶಕ್ತಿನಗರ ತಾ//ಜಿ//ರಾಯಚೂರು

ವಯಸ್ಸು : 40 ವಯಸ್ಸು

ಶೈಕ್ಷಣಿಕ ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ.

ಮೊಬೈಲ್ ಸಂಖ್ಯೆ : 9060422111

ಕುಟುಂಬ ಸದಸ್ಯರ ಸಂಖ್ಯೆ : 08

ಒಟ್ಟು ಉಳುಮೆ ಭೂಮಿ : 180

ಬೆಳೆಗಳು : ಭತ್ತ, ಹತ್ತಿ, ಮೆಣಸಿನಕಾಯಿ, ಮಾವು, ದಾಳಿಂಬೆ, ಪಪಾಯ, ಅಂಜುರ, ಮುಂತಾದವುಗಳು

ದನಕರು/ಮೀನು : ದನಕರು, ಮೀನು, ಆಕಾಳು, ಎಮ್ಮೆ, ಕುರಿ, ಕೋಳಿ, ಸಿಗಡಿಮೀನು

ಉದ್ಯಮಗಳು : ಅಂಜುರ ಡ್ರೈ ಪುಟ್ಸ್ ಮಾಡಿ ಪ್ರೆಸ್ ಮಾರಾಟ ಮಾಡುವುದು

ಪ್ರಶಸಿ/ಗೌರವಗಳು : 1. ಅತ್ಯುತ್ತಮ ಜಿಲ್ಲೆಯ ರೈತ (ರೈತ ಸಂಪರ್ಕ ಕೇಂದ್ರ)
2. ಉದಯೋನ್ಮುಖ ರೈತ ರಾಜ್ಯ ಸರ್ಕಾರ (ರಾಜ್ಯಮಟ್ಟ)



ವಾರ್ಷಿಕ ಒಟ್ಟು ಆದಾಯ : 150.00 ಲಕ್ಷ

ವಿಶೇಷತೆಗಳು:



- 20 ಎಕರೆಯಲ್ಲಿ ಕೃಷಿ ಬಂಡು ನಿರ್ಮಿಸಿ ಸಿಗಡಿಮೀನು ಸಾಕಣಿಕೆ ಮಾಡುತ್ತಾರೆ
- ಕೃಷಿ ಜೊತೆಗೆ ತೋಟಗಾರಿಕೆ ಬೆಳೆಗಳು ಹಾಗೂ ಹೈನುಗಾರಿಕೆ ಮಾಡುತ್ತಾರೆ
- ಹನಿ ನೀರವಾರಿ ಪದ್ಧತಿಯ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಹೆಚ್ಚಿನ ಇಳುವರಿಯನ್ನು ಪಡೆಯುತ್ತಿದ್ದಾರೆ.
- ತೋಟಗಾರಿಕೆ ಬೆಳೆಗಳಾದ ಅಂಜೂರು 8 ಎಕರೆ, ಮಾವು 45 ಎಕರೆ, ದಾಳಿಂಬೆ 22 ಎಕರೆ, ಪಪಾಯ 10 ಎಕರೆ ಮತ್ತು ಲಿಂಬು 4 ಎಕರೆ ಸಹ ಬೆಳೆಯುತ್ತಿದ್ದಾರೆ.
- ಇವರ ಜಮೀನಿನಲ್ಲಿ ಹಣ್ಣಿನ ಬೆಳೆಗಳನ್ನು ಸ್ಥಳೀಯವಾಗಿ ತೋಟದಲ್ಲಿ ಮಾರಾಟ ಮಾಡುತ್ತಿದ್ದಾರೆ.
- ದೊಡ್ಡ ಪ್ರಮಾಣದ ಉದ್ಯಮದಾರರ "ಪರಿಸರ ಪ್ರೇಮಿ" ರೈತ ಉತ್ಪಾಕರ ಸಂಘ ಶೀರ್ಷಿಕೆಯಡಿಯಲ್ಲಿ ವಾಣಿಜ್ಯ ಇಲಾಖೆಯಿಂದ ನೊಂದಾಯಿಸಿ ಕೊಂಡಿರುತ್ತಾರೆ.
- ಆಹಾರ ಇಲಾಖೆಯಿಂದ ಎಫ್.ಎಫ್.ಎಸ್.ಐ ನೊಂದಾಯಿಸಿ ಕೊಂಡಿರುತ್ತಾರೆ.
- ಅಂಜುರವನ್ನು ಸಂಸ್ಕರಣೆ ಮಾಡಿ ತಮ್ಮದೆ ಬ್ರಾಂಡಿನಲ್ಲಿ ಮಾರಾಟ ಮಾಡುತ್ತಾರೆ
- ತೋಟಗಾರಿಕೆ ಇಲಾಖೆ, ರಾಯಚೂರು ಇವರಿಂದ ಅಂಜುರವನ್ನು ಸಂಸ್ಕರಣೆ ಪ್ಯಾಕ್ ಹೌಸ್‌ನ್ನು ಪಡೆದುಕೊಂಡು ಅಂಜೂರು ಉತ್ಪಾದಾನಗಳನ್ನು ಉತ್ಪಾದಿಸಿ ಸ್ಥಳಿಯ ಮತ್ತು ಬೇರೆ ಜಿಲ್ಲೆಗಳಿಗೆ ಮಾರಾಟವನ್ನು ಮಾಡುತ್ತಿದ್ದಾರೆ.
- ಕೃಷಿ ವಿಜ್ಞಾನ ಕೆಂದ್ರದ ಸತತ ಮಾರ್ಗದರ್ಶನದಲ್ಲಿ ಕೃಷಿಯಲ್ಲಿ ಹೆಚ್ಚು ಆದಾಯ ಪಡೆಯುತ್ತಾರೆ.





- ಇವರು ತಮ್ಮ 180 ಎಕರೆ ಜಮೀನಿನಲ್ಲಿ ಸಮಗ್ರ ಕೃಷಿ ಅಳವಡಿಕೆ ಮಾಡಿದ್ದಾರೆ.
- ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ತರಕಾರಿ ಮತ್ತು ಹಣ್ಣಿನ ಬೆಳೆಗಳನ್ನು ಸಹ ಬೆಳೆಯುತ್ತಿದ್ದಾರೆ.
- ತಮ್ಮ ಜಮೀನಿನ ಬೋರ್ವೆಲ್ ನೀರನ್ನು ಹೊರ ತೆಗೆಯಲು ಸೋಲಾರ ಪೇನಲ್ ಬಳಕೆ ಹಾಗೂ ಸೋಲಾರ ಫೆನ್ಸಿಂಗ್ ಬಳಸಿಕೊಂಡು ತಮ್ಮ ಜಮೀನನ್ನು ರಕ್ಷಣೆ ಮಾಡಿಕೊಂಡಿರುತ್ತಾರೆ.
- ಅರಣ್ಯ ಕೃಷಿಯನ್ನು ಅಳವಡಿಸಿಕೊಂಡಿದ್ದಾರೆ.
- ಜಮೀನಿನ ಬದುವಿನಲ್ಲಿ ಶ್ರೀಗಂಧ, ಹೆಬ್ಬೆವು, ಮಹಾಗನಿ, ತೆಂಗು ಮತ್ತು ನುಗ್ಗೆ ಬೆಳೆಗಳನ್ನು ಬೆಳೆಯತ್ತಿದ್ದಾರೆ
- ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ದ್ವಿದಳ ಧಾನ್ಯಗಳು ಬೆಳೆಗಳನ್ನು ಸಹ ಬೆಳೆಯುತ್ತಿದ್ದಾರೆ.
- ಜಮೀನಲ್ಲಿ ಕಸಕಡ್ಡಿಗಳನ್ನು ಬಳಸಿ ಎರೆಹುಳ ಗೊಬ್ಬರವನ್ನು ತಯಾರಿಸಿ ಜಮೀನಿಗೆ ಬಳಸುವುದರೊಂದಿಗೆ ಸಾವಯವ ಕೃಷಿಯ ಬಗ್ಗೆ ಹೆಚ್ಚು ಗಮನ ಹರಿಸಿ, ಮಾರಾಟವು ಸಹ ಮಾಡುತ್ತಿದ್ದಾರೆ.
- ಇವರ ಜಮೀನಿನಲ್ಲಿ ಪ್ರತಿ ದಿನ 15 ರಿಂದ 20 ಜನ ಕೃಷಿ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ.
- ಕೃಷಿಯಿಂದ ಉತ್ತಮ ಆರ್ಥಿಕತೆಯನ್ನು ಹೊಂದಿ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.

